**Scholarly Research Journal for Humanity Science & English Language,**
**Online ISSN 2348-3083, SJ IMPACT FACTOR 2024: 8.058,**
https://www.srjis.com/issues_data/238
PEER REVIEWED, REFEREED & INDEXED JOURNAL, AUG-SEPT 2024, VOL-12/65

# ಗಾದೆಗಳಲ್ಲಿನ ನೀತಿಗಳು : ಒಂದು ವಿವೇಚನೆ

## GADHEGALALINA NEETHIGALU: ONDHU VIVECHANE

**ಡಾ.ಶಾಂತಮ್ಮ ಟಿ .ಆರ್**

ಸಹ ಪ್ರಾಧ್ಯಾಪಕರು ಕನ್ನಡ ವಿಭಾಗ

ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಯಲಹಂಕ

**Dr. Shanthamma T.R**

*Associate Professor Dept. of Kannada, Govt. First Grade College Yelahanka*

*Bengaluru 560064*

**Paper Received On**: 21 August 2024

**Peer Reviewed On**: 25 September 2024

**Published On:** 01 October 2024

**ಗಾದೆಗಳು :–** ಜನಪದ ಸಾಹಿತ್ಯದಲ್ಲಿಅತ್ಯಂತ ಹೆಚ್ಚು ಜನಪ್ರಿಯವಾದ ಮತ್ತು ಬಳಕೆಯಲ್ಲಿರುವುದು ಗಾದೆಗಳು. ಜನಪದರ ವಿಶ್ವಕೋಶದಂತಿರುವ ಈ ಗಾದೆಗಳು ಅವರ ಬದುಕಿನಅನುಭವದಿಂದ ಮತ್ತುಜೀವನದರ್ಶನದಿಂದ ಹುಟ್ಟಿಕೊಂಡಅಮೃತ ಸಂಜೀವಿನಿಯಂತೆ. ಒಂದು ದಿನವೆಲ್ಲ ಹೇಳುವ ಮಾತನ್ನುಒಂದುಗಾದೆ ಹೇಳಬಲ್ಲದು. ಆದ್ದರಿಂದಲೇ ಅವುಗಳಿಗಿರುವ ಶಕ್ತಿ, ಸತ್ವ, ಚೈತನ್ಯ ಮತ್ತು ನಿರಂತರತೆಗಳಿಂದಾಗಿ ಇಂದಿಗೂ ಜನಮಾನಸದಲ್ಲಿ ಬೆಳಗುತ್ತಿರುವುದು. "ಆಡು ಮುಟ್ಟದ ಸೊಪ್ಪಿಲ್ಲ, ಗಾದೆ ಒಳಗೊಳ್ಳದ ವಿಷಯವಿಲ್ಲ ಎಂಬಂತೆ ಬದುಕಿನಎಲ್ಲ ಸಂದರ್ಭ, ಸನ್ನಿವೇಶಗಳಲ್ಲಿ ನಮ್ಮನ್ನು ಕೈ ಹಿಡಿದು ನಡೆಸುವಂತದ್ದು. ಬದುಕಿನ ತಿಳುವಳಿಕೆಯನ್ನು ವಿಸ್ತಾರಗೊಳಿಸುವಂತಹ ಶಕ್ತಿಯಿರುವುದು ಗಾದೆಗಳಿಗೆ. ಆದ್ದರಿಂದಲೇಜಗತ್ತಿನಎಲ್ಲ ದೇಶಗಳಲ್ಲೂ, ಭಾಷೆಗಳಲ್ಲೂ ಗಾದೆಗಳಿರುವುದನ್ನು ಕಾಣಬಹುದು. ಇಂತಹ ಗಾದೆಗಳು ಸಮುದಾಯವೊಂದರ ಸಾಂಸ್ಕೃತಿಕ ಮೌಲ್ಯಗಳನ್ನು, ಜೀವನದರ್ಶನವನ್ನು ಒಳಗೊಂಡಿರುವಂತವು. ವ್ಯಕ್ತಿ, ಸಮುದಾಯ, ವ್ಯವಸ್ಥೆ ಇವುಗಳನ್ನು ತಿದ್ದುವ, ಮಾರ್ಗದರ್ಶನ ಮಾಡುವ, ಧೈರ್ಯತುಂಬುವ ಶಕ್ತಿ ಗಾದೆಗಳಿಗಿದೆ. ಗಾದೆಗಳ ಹುಟ್ಟು ನಿಜಕ್ಕುಕುತೂಹಲಕಾರಿಯಾದದ್ದು. ದಿಢೀರ್ಅಂತರೂಪುಗೊಂಡವಲ್ಲ ಗಾದೆಗಳು ಶತಮಾನಗಳಿಂದ ರೂಪಿತಗೊಂಡು ಬದುಕಿನ ಕ್ರಮಗಳನ್ನು ಅರಿಯುವಲ್ಲಿ ಗಾದೆಗಳು ಸಹಕಾರಿಯಾಗುತ್ತವೆ.

*Copyright@2024 Scholarly Research Journal for Humanity Science & English Language*

ಗಾದೆಎಂದರೇನು? ಎಂಬ ಪ್ರಶ್ನೆಗೆ ಸುಲಭವಾದಉತ್ತರ ಸಿಗುವುದಿಲ್ಲ ಗಾದೆಯನ್ನು 'ಅದೇನೋ ಹೇಳ್ತಾರಲ್ಲ' ಎಂದೇಜನಪದರುತಮ್ಮ ಮಾತುಗಳಲ್ಲಿ ಬಳಸುತ್ತಾರೆ. "ಗಾದೆಗಳು ಆಡು-ನುಡಿಯ ಅಂಗಾಂಶಗಳು. ದೈನಂದಿನ ಜೀವನದ ಘಟನೆಗಳೇ ಇವುಗಳಲ್ಲಿ ಪ್ರತಿಮೆಗಳು, ಇದರಕರ್ತೃಯಾರೆಂಬುದು ಸ್ಪಷ್ಟವಿಲ್ಲ. ಸಮೂಹದಲ್ಲಿ ಬಳಕೆಯಾಗಿ ಮನ್ನಣೆಗಳಿಸುವ ಯಾವುದೇಗಾದೆಚಲಾವಣೆಯನ್ನು ಪಡೆದಿರುತ್ತದೆ." ಇವುಗಳ ಹುಟ್ಟು ಮತ್ತು ಬಳಕೆಯ ಸಂದರ್ಭಅನಿರೀಕ್ಷಿತವಾದದ್ದು. ಗಾದೆಯೆಂಬುದು ಹಲವು ವ್ಯಕ್ತಿಗಳಲ್ಲಿನ ಜ್ಞಾನವಾಗಿರೂಪುಗೊಂಡಿರುತ್ತವೆ. ಈ ಕಾರಣದಿಂದಲೇ "ಸಾಮಾನ್ಯವಾಗಿ ಬಳಕೆಯಲ್ಲಿರುವ ಸಂಕ್ಷಿಪ್ತವಾದ ಸೂತ್ರ ಪ್ರಾಯವಾದ ಹೇಳಿಕೆ ಇದು. ಅನುಭವ ಮತ್ತು ವೀಕ್ಷಣೆಯಿಂದಗೊತ್ತಾದ, ಸರ್ವರಿಗೂಚಿರಪರಿಚಿತವಾದ ಕೆಲವು ಸತ್ಯಗಳನ್ನು ಅಭಿವ್ಯಕ್ತಿಸುವ ಸಂಕ್ಷಿಪ್ತ ವಾಕ್ಯವನ್ನುಗಾದೆಎನ್ನಲಾಗಿದೆ" ಇಂತಹಚಿರಪರಿಚಿತವಾದ ಗಾದೆಗಳನ್ನು ಜನಪದರುತಮ್ಮ ಮಾತಿನಲ್ಲಿಒಂದು ಶಕ್ತಿಯಾಗಿ, ಸಂದರ್ಭಕ್ಕೆತಕ್ಕ ಹಾಗೇ ಬಳಸುತ್ತಾರೆ. ಈ ಕಾರಣದಿಂದಲೇ "ಬಾಯಿದ್ದವನು ಬರಗಾಲದಲ್ಲೂ ಗೆಲ್ತಾನೆ" ಎಂದು ಹೇಳಬಹುದು. ಇಂತಹ ಗಾದೆಗಳು ವ್ಯಕ್ತಿಯೊಬ್ಬನ ಶಕ್ತಿಯಾಗಿಯು ಪರಿವರ್ತಿತವಾಗಬಲ್ಲವು.

ಗಾದೆಗಳು ಪರಂಪರೆಯಿಂದ ಬಂದು ಸಮುದಾಯಗಳ ಒಟ್ಟು ಬದುಕಿನ ಸಾರರೂಪದಲ್ಲಿ ಹುಟ್ಟಿಕೊಂಡಿರುವಂತಹವುಗಳು ಎಂದು ಹೇಳಬಹುದು. ಗಾದೆಗಳಿಂದ ನಂಟು ಬೆಳೆಯುತ್ತದೆ. ಗಂಟುಉಳಿಯುತ್ತದೆ. ಮನುಷ್ಯನ ಮನಸ್ಸನ್ನು ಅರ್ಥಮಾಡಿಕೊಳ್ಳುತ್ತದೆ. ಈ ಕಾರಣದಿಂದಲೇ ಗಾದೆಗಳು ಸರ್ವವ್ಯಾಪ್ತಿಯಾಗಿ ಬಳಕೆಯಲ್ಲಿರುವುದು. ಯಾವುದೇ ಸಮಾಜ, ಸಮುದಾಯಕೂಡಾಇಂತಹ ಗಾದೆಗಳಿಂದ ಹೊರತಾದುದ್ದಲ್ಲ ಕೆಲವೊಂದು ಸಂದರ್ಭಗಳನ್ನು ಹೊರತುಪಡಿಸಿದರೆ ಉಳಿದಂತೆ ಗಾದೆಗಳನ್ನು ಯಾರು ಪ್ರಶ್ನಿಸುವುದಿಲ್ಲ. ಅವುಗಳನ್ನು ವಿಮರ್ಶಿಸುವ ಕೆಲಸವನ್ನು ಮಾಡುವುದಿಲ್ಲ. ಅವುಗಳನ್ನು ಒಪ್ಪಿಕೊಂಡೇ ಮುಂದುವರಿಯುತ್ತಾರೆ. ಗಾದೆಗಳು ಜನಪದರು ರೂಪಿಸಿದ ಅದ್ಭುತವಾದ ಬದುಕಿನ ರೂಪಕಗಳಿವು. ಇಂತಹ ಗಾದೆಗಳು ಜನ ಬಳಕೆಯಲ್ಲಿರುವ ಮುತ್ತುಗಳು. ಆದ್ದರಿಂದಲೇ ಗಾದೆಗಳಲ್ಲಿ ಸತ್ವವಿದೆ, ಕಾವ್ಯವಿದೆ, ಸೊಬಗಿದೆ, ಸತ್ಯದರ್ಶನವಿದೆ, ವಿವೇಕವಿದೆ. ಇಂತಹ ಅನೇಕ ಅಂಶಗಳು ಗಾದೆಗಳಲ್ಲಿ ಹಾಸುಹೊಕ್ಕಾಗಿವೆ. ಇವುಗಳನ್ನು ಕುರಿತು ಮಾಸ್ತಿಯವರು "ಗಾದೆಯನ್ನು ಕೇಳಿದ ಜನಅದರ ದಿಟಕ್ಕೆ, ಚೆಲುವಿಗೆ ಮನಸೋತುಅದನ್ನು ನೆನಪಿನಲ್ಲಿಟ್ಟುಕೊಳ್ಳುತ್ತಾರೆ. ಉಪಯೋಗಿಸುವ ಸಂದರ್ಭ ಮತ್ತೆ ಬಂದಾಗಅದನ್ನುಉದಾಹರಿಸುತ್ತದೆ. ಹೀಗಾಗಿ ಆ ನುಡಿ-ನಾಡುನುಡಿಯಾಗಿ ಬೆಲೆ ಪಡೆಯುತ್ತದೆ. ನಾಣ್ಯವಾಗಿ ನಡೆಯುತ್ತದೆ"ಎಂದಿದ್ದಾರೆ.

. ಈ ಸಮುದಾಯದ ಕೆಲವು ಗಾದೆಗಳು ಬೇರೆ ಸಮುದಾಯಗಳಲ್ಲೂ ಚಾಲ್ತಿಯಲ್ಲಿವೆ. ಮೂಢನಂಬಿಕೆ, ಜಾತಿ, ವೃತ್ತಿ, ಹೆಣ್ಣನ್ನುಕುರಿತಂತೆ ಅನೇಕ ಗಾದೆಗಳು ರೂಪುಗೊಂಡಿವೆ. ಎಲ್ಲ ಗಾದೆಗಳನ್ನು ವರ್ಗೀಕರಿಸುವುದು ಸುಲಭವಲ್ಲ. ಹೇಗೆ ವರ್ಗೀಕರಿಸಿದರೂ ಗಾದೆಗಳನ್ನು ಸಂಪೂರ್ಣವಾಗಿ ಹೇಳಿದಂತಾಗುವುದಿಲ್ಲ. ಅಧ್ಯಯನದದೃಷ್ಟಿಯಿಂದ 1) ವೃತ್ತಿಜಾತಿಯಾಧಾರಿತ ಗಾದೆಗಳು 2) ಸ್ತ್ರೀಪ್ರಧಾನ ಗಾದೆಗಳು 3) ಸಾಮಾಜಿಕ ನೀತಿ ಪ್ರಧಾನ ಗಾದೆಗಳು ಎಂದೂ ಮೂರುರೀತಿ ವರ್ಗೀಕರಿಸಿಕೊಳ್ಳಲಾಗಿದೆ.

**ವೃತ್ತಿ-ಜಾತಿಯಾಧಾರಿತಗಾದೆಗಳು :-** ಈ ವಿಭಾಗದಲ್ಲಿರುವ ಗಾದೆಗಳನ್ನು ಮಾಡುವ ಕೆಲಸ ಮತ್ತುಜಾತಿಯಕಾರಣಕ್ಕಾಗಿ ಹುಟ್ಟಿಕೊಂಡಂತವುಗಳು. ಕೆಲವು ಗಾದೆಗಳು ನಿರ್ದಿಷ್ಟವಾಗಿ ಮಾದಿಗಜಾತಿಗೆ ಸಂಬಂಧಪಟ್ಟರೆ ಉಳಿದ ಗಾದೆಗಳು ಇತರೇ ಸಮುದಾಯದವರನ್ನುಕುರಿತ ಗಾದೆಗಳು. ಗ್ರಾಮೀಣ ಭಾಗದಲ್ಲಿ ವೃತ್ತಿಯನ್ನುಗುರುತಿಸುವುದೇ ಜಾತಿಗಳಿಂದ ಈ ಕಾರಣದಿಂದಲೇಜಾತಿಯ ಮತ್ತು ವೃತ್ತಿಯ ಬಗೆಗಿನ ಗಾದೆಗಳನ್ನಿಲ್ಲಿ ಒಟ್ಟಾಗಿಯೇ ವಿಶ್ಲೇಷಿಸಲಾಗಿದೆ. ಈ

ಸಮುದಾಯದಜನರು ಮೂಲತಃಊರೊಟ್ಟಿಗಿನ ಕೆಲಸ ಕಾರ್ಯಗಳಲ್ಲಿ, ಗೌಡರ ಹೊಲ ಗದ್ದೆಗಳಲ್ಲಿ ದುಡಿಯುತ್ತಿದ್ದವರುಇಂತಹ ಸಂದರ್ಭದಲ್ಲಿ "ಮಾದಿಗನ ಮಾತು ಮಾಯಕೊಟ್ಟ ಕಾಸು ಪೋಯ" ಎಂಬ ಗಾದೆಯನ್ನು ನೋಡಬಹುದು. ಈ ಗಾದೆಯ ಹುಟ್ಟಿಗೆ ಮಾದಿಗರು ದಿನನಿತ್ಯದದುಡಿಮೆಯಿಂದಾಗಿ ವಿಶ್ರಾಂತಿ ಪಡೆದುಕೊಳ್ಳುವ ಸಲುವಾಗಿ ಕೆಲಸಕ್ಕೆ ಹೋಗುತ್ತಿರಲಿಲ್ಲ. ಜೊತೆಗೆ ಈಗಾಗಲೇ ತೆಗೆದುಕೊಂಡಿರುವ ಹಣವುಕೂಡಾ ಲೆಕ್ಕಕ್ಕೆ ಬರುತ್ತಿರಲಿಲ್ಲ. ಮತ್ತೆ ಕೆಲಸಕ್ಕೆ ಕರೆಯಲು ಹೋದಾಗ ಹಣ ನೀಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದ್ದಿರಬೇಕು. "ಹೊಲೆಯನಿಗೆಹೊತ್ತರಿಯದು, ಮಾದಿಗನಿಗೆ ಮಧ್ಯಾಹ್ನಅರಿಯದು" ಎಂಬ ಗಾದೆಯುಎರಡುಅಸ್ಪೃಶ್ಯ ಸಮುದಾಯಗಳನ್ನು ವೇಳೆರಹಿತ ದುಡಿಮೆಯ ಬಗೆಗೆ ಹೇಳುವಂತದ್ದು. ಊರಿನ ಕೆಲಸಕಾರ್ಯಗಳನ್ನು ಮಾಡಬೇಕಾದ ಸಮಯಕ್ಕೆ ಮಿತಿಇರಲಿಲ್ಲ. ಈ ಎರಡು ಸಮುದಾಯಗಳಲ್ಲಿ 'ಸಮಯ ಪ್ರಜ್ಞೆ' ಇಲ್ಲದಿರುವುದನ್ನುಕೂಡಾಗಾದೆ ಹೇಳಿದಂತಿದೆ. ಈ ಗಾದೆಯು ಬಹುಶ್ಯಊರಿನ ಮೇಲ್ಜಾತಿಯವರಿಂದ ಸೃಷ್ಟಿಯಾಗಿರಬೇಕೆನಿಸುತ್ತದೆ. ಇದೇರೀತಿಯಇನ್ನೊಂದುಗಾದೆಯನ್ನಿಲ್ಲಿಕಾಣಬಹುದು. "ಬೇಡ ಕಳ್ಳ ಮಾದಿಗ ಸುಳ್ಳ" ಎಂಬ ಜಾತಿ ನಿಂದಕಗಾದೆಯಲ್ಲಿ ಮಾದಿಗ ಸಮುದಾಯದಜನರು ಶ್ರಮಜೀವಿಗಳಾಗಿ ಕತ್ತೆದುಡಿತದಿಂದ ತಪ್ಪಿಸಿಕೊಳ್ಳಲು ವಿಶ್ರಾಂತಿಯನ್ನು ಬಯಸುತ್ತಿದ್ದರೆನಿಸುತ್ತದೆ. ಆ ಸಮಯಕ್ಕೆ ಕೆಲಸಕ್ಕೆ ಕರೆಯಲು ಬಂದವರಿಗೆ ಸುಳ್ಳನ್ನು ಹೇಳಿರಬೆಕೆನಿಸುತ್ತದೆ. ಈ ಕಾರಣದಿಂದಲೇ ಈ ಗಾದೆಯು ಈ ಸಮುದಾಯಕ್ಕೆಅಂಟಿದ ಕಳಂಕದ ರೀತಿಯಲ್ಲಿರೂಡಿಯಲ್ಲಿರುವುದನ್ನುಕಾಣುತ್ತೇವೆ.

"ತೊಗಲು ಮುಕಳಿಯವ ಏನು ಬಲ್ಲ, ಮುಗಿಲು ಮೇಗಳ ಸುದ್ದಿಯ" ಎಂಬ ಗಾದೆಯಲ್ಲಿ ಈ ಸಮುದಾಯದ ವೃತ್ತಿಯಾದಚರ್ಮತೆಗೆದು, ಹದ ಮಾಡುವಕಾರ್ಯದಲ್ಲಿ ನಿರತನಾಗಿದ್ದು ಬೇರೆ ವಿಷಯಗಳ ಬಗ್ಗೆ ಹೇಗೆ ತಿಳಿಯಬೇಕು. ಎಂಬುದನ್ನು ಹೇಳುತ್ತಿದೆ. ಅದೇನುಎಲ್ಲರೂ ನೋಡುವಂತಹ ಸ್ಥಳದಲ್ಲಿ ಮಾಡುವ ಕೆಲಸವಲ್ಲವಾದ್ದರಿಂದಊರಾಚೆಯಾವುದೂ ಬಯಲಲ್ಲಿ ಇದ್ದರೆ, ಊರಿನ ಸುದ್ದಿಗಳು ಇವರಿಗೆ ಹೇಗೆ ತಿಳಿಯಬೇಕು. ಜೊತೆಗೆ ಮೇಲ್ಜಾತಿಯವರಕೇರಿಗೂ ನಿಷೇಧವಿದ್ದಕಾರಣ, ಹೊರಜಗತ್ತಿನ ಸುದ್ದಿಗಳಿಂದಲೂ ವಿಮುಖರಾದಕಾರಣಇಂತಹಗಾದೆಯು ಹುಟ್ಟಿಕೊಂಡಿರಬೇಕು. "ಏಳೂರು ಮಾದಿಗರು ಸೇರಿಕೊಂಡುತೊಗಲು ಹದಗೆಡಿಸಿದರು" ಎಂಬ ಗಾದೆಯು ಈ ಸಮುದಾಯದವರನ್ನುಒಟ್ಟಾಗಿ ಸೇರದೇಇರುವ ಹಾಗೇ ಭಾವಿಸಿದಂತಿದೆ. ಜೊತೆಗೆಚರ್ಮ ಬಿಡಿಸುವ ಕೆಲಸ ಅತೀ ಸೂಕ್ಷ್ಮದ್ದಾಗಿದ್ದು ನುರಿತವನೊಬ್ಬ ಬಿಡಿಸಿದರೆ ಚರ್ಮ ಸಿಗುತ್ತದೆ. ಇಲ್ಲವಾದಲ್ಲಿಎಲ್ಲರೂ ಕೈ ಹಾಕಿ ಚರ್ಮ ಬಿಡಿಸಲು ಹೋದರೆಚರ್ಮ ಸಿಗದೇ ಹೋಗಬಹುದು. ಈ ಕಾರಣದಿಂದಲೇಇಂತಹಗಾದೆಯೊಂದು ಹುಟ್ಟಿಕೊಂಡಿರಬೇಕು. ಹೀಗೆ ಬಿಡಿಸಿದ ಚರ್ಮಯಾವುದಕ್ಕೂಉಪಯೋಗಕ್ಕೆ ಬಾರದೇ ಹೋಗಬಹುದು. ಆದ್ದರಿಂದಲೇ ಈ ಗಾದೆಯು ವೃತ್ತಿಯಲ್ಲಿ ಸೂಕ್ಷ್ಮತೆ ಮತ್ತು ಈ ಸಮುದಾಯದವರುಒಟ್ಟಾಗಿಲ್ಲದಿರುವುದನ್ನು ಹೇಳುತ್ತಿದೆ.

"ವಾಜನ ಮಾತೂಗಾಜೂಗೂಜು" ಎಂಬ ಗಾದೆಯಲ್ಲಿಅಕ್ಕಸಾಲಿಗರ ವೃತ್ತಿಯ ಬಗೆಗಿನ ಅಸ್ಪಷ್ಟತೆಯನ್ನು ಹೇಳುತ್ತಿದೆ. ಇವರು ಮಾಡುವ ಕೆಲಸ ಮತ್ತು ಹೇಳುವ ಮಾತಿನಲ್ಲಿ ವ್ಯತ್ಯಾಸಗಳರುತ್ತವೆ. ಸ್ವಂತ ಹೆಂಡತಿಯಚಿನ್ನವನ್ನೇ ಬೇಕಾದರೂ ಸ್ವಲ್ಪ ಎತ್ತಿಕೊಳ್ಳುವಂತವರು ಈ ಕಾರಣಕ್ಕಾಗಿಯೇಇಂತಹದೊಂದುಗಾದೆ ಹುಟ್ಟಿಕೊಂಡಿದೆಎಂದೆನಿಸುತ್ತದೆ. "ಅಗಸ ನೀರಲ್ಲಿ ನಿಂತುಕೈಲಾಸದ ಕನಸ ಕಂಡನಂತೆ" ಎಂಬ ಗಾದೆಯತಾನು ಮಾಡುವ ಕೆಲಸದ ಬಗ್ಗೆ ಯೋಚಿಸದೇ ನೀರಿನಲ್ಲಿದ್ದೇನೆ ಎಂಬ ಕಾರಣಕ್ಕಾಗಿಕೈಲಾಸದಕನಸನ್ನುಕಾಣುತ್ತಾನೆ. ಅಸಂಭವವವಾದುದ್ದನ್ನು ಪಡೆಯುತ್ತೇನೆ ಎಂಬ

Copyright@2024 Scholarly Research Journal for Humanity Science & English Language

ಆಸೆಯೊಂದು ಈ ಗಾದೆಯಲ್ಲಿರುವುದು ವ್ಯಕ್ತವಾಗುತ್ತದೆ. ಇಂತಹಜಾತಿ–ವೃತ್ತಿ ಆಧರಿಸಿ ಗಾದೆಗಳು ಪ್ರಚಲಿತದಲ್ಲಿರುವುದನ್ನುಕಾಣುತ್ತೇವೆ.

"ಗೌಡಅಂತಕರೆದರೆ, ಓ ಅಂದನಂತೆ, ಒಂದಾಳಿಗೆ ಹಿಟ್ಟುಅಂದರೆ ಮಾತಿಲ್ಲಕತೆಯಿಲ್ಲ," ಹಸಿದುಕೊಂಡ ಹೋದ ವ್ಯಕ್ತಿಊರಿನಗೌಡಊಟನೀಡುತ್ತಾನೆ ಎಂಬ ಭರವಸೆಯೊಂದಿಗೆಗೌರವವಾಗಿಕರೆದಾಗಓಗೊಡುವಗೌಡ, ಊಟವೆಂದಾಗಕೊಡದೇ ಸುಮ್ಮನಾಗುವುದನ್ನುಕಾಣಬಹುದು. ಗೌಡನಾದವನಿಗೆ ಬರೀ ಪ್ರತಿಷ್ಠೆ, ತೋರ್ಪಡಿಕೆಇದ್ದರಷ್ಟೇ ಸಾಲದುಕಷ್ಟದಲ್ಲಿರುವವರಿಗೆ ಸಹಾಯ ಮಾಡಬೇಕುಎನ್ನುವುದನ್ನು ಈ ಗಾದೆಯು ಹೇಳುತ್ತಿದೆ. ಇನ್ನಿತರಜಾತಿ ವೃತ್ತಿಸಂಬಂಧಿ ಗಾದೆಗಳು ಹೀಗಿವೆ:

1) *ಕುರಿಕಾಯೋಕುರುಬ ಅಂದ್ರೇ ಸಂಬಳ ಎಷ್ಟು ಅಂದ್ನಂತೆ*
2) *ಕುರಿಕೊಬ್ಬಿದರೆಕುರುಬನಿಗೆ ಲಾಭ*
3) *ಕಜ್ಜಿ ಹೋದರುಕಡಿತ ಹೋಗಲ್ಲ, ಕಸಬು ಹೋದರು ವರಸೆ ಹೋಗಲ್ಲ.*
4) *ಹಾಳದ ಊರಲ್ಲಿ ಉಳಿದವನೇ ಗೌಡ*
5) *ಮಾದಿಗಿತ್ತಿ ಮೊಲೆ ಚೆಂದಒಕ್ಕಲಿಗಿತ್ತಿಒಗೆತನಚೆಂದ*
6) *ಒಡವರಿಗೆಒಡವೆಕೊಟ್ಟರೆ ಮಾದ್ಲಗಿತ್ತಿಗೆ ಮುನಿಸು ಬಂತ್ತಂತೆ.*
7) *ಬಡಗಿ ಮನೆ ಸಟ್ಟುಗತೂತು*
8) *ಆಳು ಮೇಲೆ ಆಳು ಬಿದ್ದುದೋಣಿ ಬರಿದಾಯ್ತು*
9) *ಹೊಲೆಯ ಹೊಟ್ಟೇಲಿ ಹಾಕಿ ಮಾದಿಗರ ಹೊಟ್ಟೇಲಿ ತೆಗೆದಂತೆ*
10) *ಅಕ್ಕಸಾಲಿಗ ಅಕ್ಕನ ಒಡವೆನೂಕದಿಯದೇ ಬಿಡನು*
11) *ಅಗಸ ನೀರಿನಲ್ಲಿ ನಿಂತುಕೊಂಡುಕೈಲಾಸದ ಕನಸು ಕಂಡನಂತೆ.*
12) *ಹೊಲೆಯನ ಮಾತು ಹೊಲೆ ಮುಂದೆ.*

Copyright@2024 Scholarly Research Journal for Humanity Science & English Language